ಯಗಚಿ ಯೋಜನೆ

33 (109) ಶ್ರೀ ರುದ್ರೇಶಗೌಡ. ವೈ.ಎನ್. (ಬೇಲೂರು) : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೇಲೂರು ತಾಲ್ಲೂಕಿನ ಯಗಚಿ ಯೋಜನೆಯಡಿಯಲ್ಲಿ ಹಿನ್ನೀರಿನಿಂದ ಬನದಹಳ್ಳಿ. ಕೋಡನಹಳ್ಳಿ ಗ್ರಾಮವು ಮುಳುಗಡೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಎರಡೂ ಗ್ರಾಮಗಳು ಮುಳುಗಡೆ ವ್ಯಾಪ್ತಿಗೆ ಬಂದಿದ್ದು, ಪರಿಹಾರ ತೆಗೆದುಕೊಂಡಿದ್ದ ಪಕ್ಷದಲ್ಲಿ ಆ ಗ್ರಾಮದಲ್ಲಿ ಜಮೀನುಗಳು ಇಲ್ಲದಿರುವುದು ನಿಜವೇ;

ಇ) ಹಾಗಿದ್ದಲ್ಲಿ ಎರಡೂ ಗ್ರಾಮಗಳಿಗೆ ಪುನರ್ ವಸತಿ ಯೋಜನೆಯಡಿಯಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು (ವಿವರ ಒದಗಿಸುವುದು);

ಈ) ಹಾಗಿದ್ದಲ್ಲಿ ಈ ಗ್ರಾಮಗಳ ಗ್ರಾಮಸ್ಥರಿಗೆ ಇಲ್ಲಿಯವರೆಗೆ ಜಮೀನು ಕೊಡದೇ ಇದ್ದಲ್ಲಿ ಅದಕ್ಕೆ ಬದಲಾಗಿ ಪರಿಹಾರ ಧನ ನೀಡಲು ಸರ್ಕಾರ ಯಾವ ಕ್ರಮ ಕೈಗೊಂಡಿರುತ್ತದೆ (ವಿವರ ಒದಗಿಸುವುದು)?

ಶ್ರೀ ಬಸವರಾಜ್ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ಹೌದು, ಹಾಸನ ಜಿಲ್ಲೆ, ಬೇಲೂರು ತಾಲ್ಲೂಕು, ಕರಗಡ ಗ್ರಾಮದ ದಾಖಲೆ ಗ್ರಾಮ ಬನದಹಳ್ಳಿ ಮತ್ತು ಬೇಲೂರು ತಾಲ್ಲೂಕಿನ ಕೋಡನಹಳ್ಳಿ ಗ್ರಾಮಗಳು ಮುಳುಗಡೆಯಾಗಿರುತ್ತದೆ. ಹಾಗೂ ಮುಳುಗಡೆ ಜಮೀನುಗಳಿಗೆ ಭೂ ಪರಿಹಾರವನ್ನು ಪಾವತಿಸಲಾಗಿರುತ್ತದೆ.

ಆ) ಈ ಗ್ರಾಮಗಳು ಮುಳುಗಡೆಯಾಗಿದ್ದು, ಈ ಎರಡು ಗ್ರಾಮಗಳಲ್ಲಿ ಜಮೀನುಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 126 ಎಲ್‌ಜಿಹೆಚ್ 68, ದಿನಾಂಕ: 24-06-1971 ರಂತೆ ಪುನರ್ವಸತಿ ಯೋಜನೆಯಡಿ ಸ್ಥಳಾಂತರ ಗೊಂಡ ಪ್ರತಿ ಕುಟುಂಬಗಳಿಗೆ ತಲಾ 4 ಎಕರೆಯಂತೆ ಗರಿಷ್ಟ 10 ಎಕರೆ

ಮಿತಿಯೊಳಗೆ ಜಮೀನು ಹಂಚಿಕೆ ಮಾಡಲು ಸರ್ಕಾರಿ ಆದೇಶದಲ್ಲಿ ಅವಕಾಶವಿರುತ್ತದೆ.

ಬನದಹಳ್ಳಿ ಗ್ರಾಮವು ಕಂದಾಯ ಗ್ರಾಮವಾಗಿರುವುದಿಲ್ಲ. ಕರಗಡ ಗ್ರಾಮಕ್ಕೆ ದಾಖಲೆ ಗ್ರಾಮವಾಗಿದ್ದು, ಬನದಹಳ್ಳಿ ಗ್ರಾಮದ 27 ಜನ ಸಂತ್ರಸ್ಥರಿಗೆ 104.00 ಎಕರೆ ಜಮೀನು ಮಂಜೂರು ಮಾಡಲಾಗಿದೆ. ಕೋಡನಹಳ್ಳಿ ಗ್ರಾಮದ 18 ಸಂತ್ರಸ್ಥರಿಗೆ 71–25 ಎಕರೆ ಜಮೀನು ಮಂಜೂರು ಮಾಡಲಾಗಿದ್ದು, ಇನ್ನೂ 117 ಸಂತ್ರಸ್ಥರಿಗೆ ಜಮೀನು ಮಂಜೂರು ಮಾಡಬೇಕಿದೆ.

ಈ) ದಿನಾಂಕ: 24–06–1971 ರ ಆದೇಶದಂತೆ ಈ ಎರಡೂ ಗ್ರಾಮಗಳ ಒಟ್ಟು 162 ಸಂತ್ರಸ್ಥರ ಪೈಕಿ 45 ಕುಟುಂಬಗಳಿಗೆ ಒಟ್ಟು 175.25 ಎಕರೆ ಭೂಮಿಯನ್ನು ಕಂದಾಯ ಇಲಾಖೆಯ ವತಿಯಿಂದ ಮಂಜೂರು ಮಾಡಲಾಗಿರುತ್ತದೆ. ಉಳಿದ 117 ಸಂತ್ರಸ್ಥರಿಗೆ ಜಮೀನು ಮಂಜೂರು ಮಾಡಲು ಖಾಲಿ ಸರ್ಕಾರಿ ಜಮೀನುಗಳು ಇರುವುದಿಲ್ಲ. ಈ ಸಂತ್ರಸ್ಥರಿಗೆ ಸರ್ಕಾರಿ ಜಮೀನು ಮಂಜೂರು ಮಾಡಲು ಸುಮಾರು 500 ಎಕರೆ ಭೂಮಿ ಅವಶ್ಯಕತೆಯಿರುವುದರಿಂದ ಸರ್ಕಾರಿ ಜಮೀನು ಲಭ್ಯತೆ ಬಗ್ಗೆ ಹಾಸನ ಜಿಲ್ಲೆಯ ಜಿಲ್ಲಾಧಿಕಾರಿಯವರೊಡನೆ ಕಾವೇರಿ ನೀರಾವರಿ ನಿಗಮದಿಂದ ಪತ್ರ ವ್ಯವಹಾರ ಮಾಡಲಾಗಿದೆ.

ಜಮೀನಿಗೆ ಬದಲಾಗಿ ಪರಿಹಾರವನ್ನು ನಗದು ರೂಪದಲ್ಲಿ ನೀಡುವ ಬಗ್ಗೆ ಪರಿಶೀಲಿಸಲಾಗುವುದು.